# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 559 |
| ಸದಸ್ಯರ ಹೆಸರು | : | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 20.02.2024 |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಜೇನು ಕೃಷಿಯಲ್ಲಿ ತೊಡಗಿಸಿಕೊಂಡಿರುವವರ ಸಂಖ್ಯೆ ಎಷ್ಟು; ಹಾಗೂ ಉತ್ಪಾದನೆಯಾಗುತ್ತಿರುವ ಜೇನು ತುಪ್ಪದ ಪ್ರಮಾಣವೆಷ್ಟು;</td><td>ರಾಜ್ಯದಲ್ಲಿ ಜೇನು ಕೃಷಿಯಲ್ಲಿ ತೊಡಗಿಸಿಕೊಂಡಿರುವ ಜೇನು ಕೃಷಿಕರ ಸಂಖ್ಯೆ ಅಂದಾಜು 35,000 ಗಳಿದ್ದು, ಉತ್ಪಾದನೆಯಾಗುತ್ತಿರುವ ಜೇನುತುಪ್ಪದ ಪ್ರಮಾಣ ವಾರ್ಷಿಕ ಅಂದಾಜು 1000 ಟನ್‌ಗಳು.</td></tr>
<tr><td>ಆ)</td><td>ಜೇನು ಕೃಷಿಗೆ ಒತ್ತು ನೀಡಲು ಸರ್ಕಾರ ರೂಪಿಸಿರುವ ಕಾರ್ಯಕ್ರಮ ಮತ್ತು ಯೋಜನೆಗಳೇನು; ಹಾಗೂ ವಿನಿಯೋಗಿಸುತ್ತಿರುವ ಅನುದಾನದ ವಿವರಗಳೇನು;</td><td>ಜೇನು ಕೃಷಿಗೆ ಒತ್ತು ನೀಡಲು ರಾಜ್ಯವಲಯದಡಿ "ಮಧುವನ ಮತ್ತು ಜೇನು ಸಾಕಣೆ ಅಭಿವೃದ್ಧಿ ಯೋಜನೆ" ಹಾಗೂ ಜಿಲ್ಲಾವಲಯದಡಿ "ಜೇನು ಸಾಕಾಣಿಕೆ ಯೋಜನೆ" ಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕಾರ್ಯಕ್ರಮದ ವಿವರಗಳು ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ</th><th>ಕಾರ್ಯಕ್ರಮ</th><th>ನಿಗಧಿತ ದರ</th><th>ಪ್ರೋತ್ಸಾಹಧನ</th></tr>
<tr><td>1</td><td>ಜೇನು ಕೃಷಿ ತರಬೇತಿ ಕಾರ್ಯಕ್ರಮ (2 ದಿನಗಳ ಅವಧಿ)</td><td>ರೂ.800 / ಪ್ರತಿ ಫಲಾನುಭವಿಗೆ</td><td>100%</td></tr>
<tr><td>2</td><td>ಜೇನು ಪೆಟ್ಟಿಗೆ, ಕುಟುಂಬ ಹಾಗೂ ಸ್ಟ್ಯಾಂಡ್ ಖರೀದಿಗೆ ಸಹಾಯಧನ</td><td>ರೂ.4500 /- ಘಟಕ</td><td>ರೂ.3375/- (75% - ಸಾಮಾನ್ಯ) Rs.4050/- (90% ಪ.ಜಾ/ಪ.ಪಂ)</td></tr>
<tr><td>3</td><td>ಖಾಸಗಿ ಮಧುವನ ಸ್ಥಾಪನೆಗೆ ಸಹಾಯ.</td><td>ಗರಿಷ್ಟ ವೆಚ್ಚ ರೂ.0.51 ಲಕ್ಷಗಳು</td><td>ರೂ.0.3825ಲಕ್ಷ (75%)</td></tr>
<tr><td>4</td><td>ಜೇನು ತೆಗೆಯುವ ಯಂತ್ರ ಖರೀದಿಗೆ ಸಹಾಯಧನ</td><td>ರೂ.4500 /- ಘಟಕ</td><td>ರೂ.3375/- (75%)</td></tr>
</table>
2023-24 ನೇ ಸಾಲಿನಲ್ಲಿ ಜೇನುಕೃಷಿ ಅಭಿವೃದ್ಧಿಗಾಗಿ ವಿನಿಯೋಗಿಸುತ್ತಿರುವ ಅನುದಾನದ ವಿವರ ಕೆಳಕಂಡಂತಿದೆ.
<table>
<tr><th>ಕ್ರಸಂ</th><th>ಯೋಜನೆ</th><th colspan="3">(ರೂ.ಲಕ್ಷಗಳಲ್ಲಿ)</th></tr>
<tr><td></td><td></td><td>ನಿಗಧಿಯಾದ ಅನುದಾನ</td><td>ಬಿಡುಗಡೆ</td><td>ವಿನಿಯೋಗಿಸಿರುವ ಅನುದಾನ (ಜನವರಿ -2024 ರ ಅಂತ್ಯಕ್ಕೆ)</td></tr>
<tr><td>1</td><td>"ಮಧುವನ ಮತ್ತು ಜೇನು ಸಾಕಣೆ</td><td>200.00</td><td>166.66</td><td>125.97</td></tr>
</table>
</td></tr>
</table>

<table>
<tr><td></td><td></td><td>

| | | | | |
|---|---|---|---|---|
| | ಅಭಿವೃದ್ಧಿ ಯೋಜನೆ" | | | |
| 2 | "ಜೇನು ಸಾಕಾಣಿಕೆ ಯೋಜನೆ" | 344.55 | 309.66 | 266.86 |
| | ಒಟ್ಟು | 544.55 | 476.32 | 392.83 |

</td></tr>
<tr><td>ಇ)</td><td>ಜಾಗತಿಕ ಮಟ್ಟದಲ್ಲಿ ರಾಜ್ಯದ ಜೇನು ತುಪ್ಪದ ವಹಿವಾಟು ವಿಸ್ತರಣೆಗೆ ಸರ್ಕಾರ ರೂಪಿಸಿರುವ ಯೋಜನೆಗಳೇನು:</td><td>ಜಾಗತಿಕ ಮಟ್ಟದಲ್ಲಿ ರಾಜ್ಯದ ಜೇನು ತುಪ್ಪದ ವಹಿವಾಟು ವಿಸ್ತರಿಸಲು ಕರ್ನಾಟಕ ರಾಜ್ಯದಲ್ಲಿ ಉತ್ಪಾದನೆಯಾಗುವ ಜೇನುತುಪ್ಪ ಹಾಗೂ ಜೇನು ಉತ್ಪನ್ನಗಳಿಗೆ ಬ್ರ್ಯಾಂಡ್ ಅಭಿವೃದ್ಧಿ ಪಡಿಸಿದ್ದು, ಸದರಿ ಬ್ರ್ಯಾಂಡ್ ಹೆಸರನ್ನು Trademark Registry ಯಲ್ಲಿ ನೋಂದಾಯಿಸಲು ಕ್ರಮವಹಿಸಲಾಗುತ್ತಿದೆ.</td></tr>
<tr><td>ಈ)</td><td>ರಾಜ್ಯದ ಜೇನು ಉತ್ಪಾದಕರು ಹಾಗೂ ಮಾರಾಟಗಾರರನ್ನು ಒಂದೇ ವೇದಿಕೆಯಡಿ ತಂದು, ಒಂದೇ ಬ್ರ್ಯಾಂಡ್ ನಡಿ ಮಾರುಕಟ್ಟೆ ಕಲ್ಪಿಸುವುದು ಹಾಗೂ ಆ ಮೂಲಕ ಜಿಐ ಮಾನ್ಯತೆ ತಂದುಕೊಡಲು ಸರ್ಕಾರ ಈ ಕೂಡಲೇ ಕ್ರಮ ವಹಿಸುವುದೇ?</td><td>ರಾಜ್ಯದ ಜೇನು ಉತ್ಪಾದಕರು ಹಾಗೂ ಮಾರಾಟಗಾರರನ್ನು ಒಂದೇ ವೇದಿಕೆಯಡಿ ತಂದು, ಒಂದೇ ಬ್ರ್ಯಾಂಡ್ ನಡಿ ಮಾರುಕಟ್ಟೆ ಕಲ್ಪಿಸಲು ಇಲಾಖೆಯಿಂದ ಬ್ರ್ಯಾಂಡ್ ಹೆಸರನ್ನು ಅಭಿವೃದ್ಧಿ ಪಡಿಸಿ Trademark Registry ಯಲ್ಲಿ ನೋಂದಾಯಿಸಲು ಕ್ರಮವಹಿಸಲಾಗುತ್ತಿದೆ.<br><br>ಕರ್ನಾಟಕ ರಾಜ್ಯದ ಭೌಗೋಳಿಕ ವೈಶಿಷ್ಟ್ಯತೆಯು ಬೇರೆ ಬೇರೆಯಾಗಿರುವ ಹಿನ್ನಲೆಯಲ್ಲಿ ರಾಜ್ಯದಲ್ಲಿ ಉತ್ಪಾದನೆಯಾಗುವ ಜೇನುತುಪ್ಪಕ್ಕೆ ಜಿಐ ಮಾನ್ಯತೆ ತಂದು ಕೊಡುವ ಪ್ರಸ್ತಾವನೆಯು ಪ್ರಸ್ತುತ ಸರ್ಕಾರದ ಮಟ್ಟದಲ್ಲಿ ಇರುವುದಿಲ್ಲ.</td></tr>
</table>

No:HORTI 74 HGM 2024

**(ಎಸ್.ಎಸ್.ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು**